# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 79/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ನಾಗೇಶ.ಎಲ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಲಕ್ಷ್ಮಣ ಚಾರ್ | | **09.12.2024** |
| **ವಯಸ್ಸು** | ಃ **52** ವರ್ಷ | | |
| **ವೃತ್ತಿ** | ಃ ಸೆಕ್ಯೂರಿಟಿ ಗಾರ್ಡ್, ಆರ್.ಬಿ.ಐ | **ಪ್ರಾ.ಸಾ.** ಃ **04** | |
| **ವಾಸಸ್ಥಳ** | ಃ ಆರ್.ಬಿ.ಐ ಕ್ವಾರ್ಟರ್ಸ್ ಮೈಸೂರು | **ಚಾ.ಸಾ.** ಃ **04** | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಸುಕುಮಾರ್ ಮೆನನ್ ಸೆಕ್ಯೂರಿಟಿ ಏಜೆನ್ಸಿ ಮೂಲಕ *2019* ರಿಂದ ಇಲ್ಲಿಯವರೆಗೆ ಮೈಸೂರಿನ ಆರ್.ಬಿ.ಐ ಟೌನ್ ಶಿಫ್ಟ್ ನಲ್ಲಿ ಸೆಕ್ಯೂರಿಟಿ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ*13.01.2021* ರಂದು ನಾನು ರಾತ್ರಿ *10* ಗಂಟೆಯಿಂದ ಬೆಳಗ್ಗೆ *6* ಗಂಟೆ ಪಾಳಿಯಲ್ಲಿ ಕರ್ತವ್ಯ ಮಾಡುತ್ತಿದ್ದೆ. ಆ ಕಾಲಕ್ಕೆ ನಾನು ಮತ್ತು ಸಿದ್ದಪ್ಪ ಗೇಟ್ ನಂಬರ್ *1* ರಿಂದ ಎಸ್.ಟಿ.ಪಿ ಘಟಕದ ವರೆಗೆ ಗಸ್ತು ಕೆಲಸ ಮಾಡುತ್ತಿದ್ದೆವು. ಆ ದಿನಕಿಂತ *4-5* ದಿನ ಮೊದಲು ಗಂಧದ ಮರ ಕಳ್ಳತನವಾಗಿದ್ದ ಕಾರಣ ಹಿರಿಯ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡುವಂತೆ ಸೂಚನೆ ನೀಡಿದ್ದರು ಆ ಕಾರಣ ನಾವು ಬಹಳ ಎಚ್ಚರಿಕೆಯಿಂದ ಗಸ್ತು ಕರ್ತವ್ಯ ಮಾಡುತ್ತಿದ್ದೆವು. ಆ ಕಾಲಕ್ಕೆ ರಾತ್ರಿ *11.30* ಗಂಟೆ ಸುಮಾರಿಗೆ ಬೌಂಡ್ರಿ ಗೋಡೆ ಬಳಿ ಮನುಷ್ಯನ ಆಕೃತಿ ಕಾಣಿಸಿತ್ತು. ಆಗ ನಾವು ಟಾರ್ಚ್ ಹಾಕಿದಾಗ ಅಲ್ಲಿ ಒಬ್ಬ ವ್ಯಕ್ತಿ ನಮ್ಮ ಕ್ಯಾಂಪಸ್ ನ ಒಳಗಡೆ ಹೋಗಿದ್ದ. ಆಗ ನಾನು ವಾಕಿ

ಟಾಕಿ ಸೆಟ್ ನಿಂದ ಸೂಪರ್ ವೈಸರ್ ಗೆ ಆ ಬಗ್ಗೆ ತಿಳಿಸಿದ್ದೆ. ಆಗ ನಾವು ನಂಬರ್ *1* ಗೇಟ್ ಬಳಿ ಹೋಗಿ ಹೊರಗಡೆ ಯಾರು ಹೋಗದಂತೆ ಎಚ್ಚರವಾಗಿದ್ದೆವು. ಆ ವೇಳೆಗೆ ವಾಕಿ ಟಾಕಿ ಮೂಲಕ ಎಲ್ಲಾ ಸಿಬ್ಬಂದಿಗಳಿಗೆ ಸೂಚನೆ ಕೊಟ್ಟಿದ್ದರಿಂದ ಎಲ್ಲರು ಅಲರ್ಟ್ ಆಗಿದ್ದರು. ನಂತರ ನಾನು ಮತ್ತು ಸಿದ್ದಪ್ಪ ಗೇಟ್ ನಂಬರ್ *1* ರಿಂದ ಎಸ್.ಟಿ.ಪಿ ಘಟಕದ ವರೆಗೆ ಗಸ್ತು ಕೆಲಸ ಮಾಡಿದ್ದೆವು. ನಂತರ ಬೆಳಗ್ಗೆ ಇಬ್ಬರು ವ್ಯಕ್ತಿಗಳು ಸಿಕ್ಕಿದ್ದಾರೆ ಎಂದು ವಾಕಿ ಟಾಕಿ ಮೂಲಕ ಹೇಳಿದ್ದರಿಂದ ನಾವು ಡಾಗ್ ಹೌಸ್ ಬಳಿ ಹೋಗಿ ಆ ಇಬ್ಬರು ವ್ಯಕ್ತಿಗಳನ್ನು ನೋಡಿದ್ದೆವು. ಆ ಕಾಲಕ್ಕೆ ನಮಗೆ ಅವರ ಹೆಸರು ಹೇಳಿರಲಿಲ್ಲ. ಆಗ ***CISF*** ಸಿಬ್ಬಂದಿಗಳು ಅವರ ಹೆಸರು, ವಿಳಾಸ ತಿಳಿದುಕೊಂಡಿದ್ದರು. ಆ ಇಬ್ಬರು ವ್ಯಕ್ತಿಗಳು ನಮ್ಮ ಕ್ಯಾಂಪಸ್ ನಲ್ಲಿನ ಗಂಧದ ಮರಗಳನ್ನು ಕಳ್ಳತನ ಮಾಡಿದ್ದಾರೆ ಎಂದು ನಮ್ಮ ಅಧಿಕಾರಿಗಳು ಹೇಳಿದ್ದರು. ಈ ದಿನ ಕೋರ್ಟ್ ಮುಂದೆ ಇರುವ *2* ನೇ ಆರೋಪಿತ ಆ ದಿನ ಹಿಡಿದುಕೊಂಡಿದ್ದ ವ್ಯಕ್ತಿಗಳಲ್ಲಿ ಒಬ್ಬ ನಿರುತ್ತಾನೆ. ಈಗ ನಾನು ನೋಡುತ್ತಿರುವ ನಿ.ಪಿ-3 ರಿಂದ 16 ರಲ್ಲಿ ಕಾಣುವ ಇನ್ನೊಬ್ಬ ವ್ಯಕ್ತಿ ಆ ದಿನ ಹಿಡಿದುಕೊಂಡಿದ್ದ ಮತ್ತೊಬ್ಬ ವ್ಯಕ್ತಿ ಇರುತ್ತಾನೆ. ನಂತರ ಮೇಟಗಳ್ಳಿ ಪೊಲೀಸರು ಆ ವ್ಯಕ್ತಿಗಳನ್ನು ತಮ್ಮ ವಶಕ್ಕೆ ಪಡೆದಿದ್ದರು. ಪೊಲೀಸರು ಈ ಬಗ್ಗೆ ನನ್ನ ಹೇಳಿಕೆ ಪಡೆದಿದ್ದಾರೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ಆ ದಿನ ದಿಃ*13.01.2021* ರಂದು ರಾತ್ರಿ *11.30* ಕ್ಕೆ ನಾವು ಟಾರ್ಚ್ ಬಿಟ್ಟು ನೋಡಿದಾಗ ಇಬ್ಬರು ಅಸಾಮಿಗಳು ಕಾಡಿನೊಳಗೆ ತಲೆ ಮರೆಸಿಕೊಂಡಿದ್ದರು ಎಂದರೆ ನಿಜ. ಆ

ದಿನ ರಾತ್ರಿ ಕಾಡಿನೊಳಗೆ ಹೋಗಲು ಸಾಧ್ಯವಾಗದೇ ಇದ್ದ ಕಾರಣ ***Peripheral road*** ನಲ್ಲಿ ಮೈಕ್ ನಲ್ಲಿ ಶರಣಾಗುವಂತೆ ಎಚ್ಚರಿಕೆ ನೀಡುತ್ತಿದ್ದರು ಸಹ ಆ ವ್ಯಕ್ತಿಗಳು ಆರ್.ಬಿ.ಐ ಕ್ಯಾಂಪಸ್ ಒಳಗೆ ತಲೆ ಮರೆಸಿಕೊಂಡಿದ್ದರು ಎಂದರೆ ನಿಜ. ನಂತರ ಗುಂಡು ಹೊಡೆಯುವುದಾಗಿ ಹೇಳಿದ್ದರಿಂದ ಆ ವ್ಯಕ್ತಿಗಳು ಶರಣಾಗಿದ್ದರು ಎಂದು ತಿಳಿದುಬಂತು ಎಂದರೆ ನಿಜ. ಆ ವ್ಯಕ್ತಿಗಳು ನಮ್ಮ ಅಧಿಕಾರಿಗಳಿಗೆ ಗಂಧದ ಮರಗಳನ್ನು ಕತ್ತರಿಸಿಕೊಂಡು ಕಳ್ಳತನ ಮಾಡಿದ್ದ ಬಗ್ಗೆ ಹೇಳಿದ್ದ ವಿಷಯವನ್ನು ನಮಗೆ ತಿಳಿಸಿದ್ದರು ಎಂದರೆ ನಿಜ. ನಂತರ ಆ ದಿನ ಶರಣಾದ ವ್ಯಕ್ತಿಗಳ ಹೆಸರು ರಘು ಮತ್ತು ಮಂಜುನಾಥ ಎಂದು ನನಗೆ ಗೊತ್ತಾಗಿತ್ತು ಎಂದರೆ ನಿಜ. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*